(ಈ) ಧಾರವಾಡ ಸಮೀಪದ ಗರಗ ಗ್ರಾಮದ ಬಳಿ ಡಿಸ್ಟಿಲರಿ ಮತ್ತು ಬಾಟ್ಲಿಂಗ್ ಕಾರ್ಖಾನೆ ಪ್ರಾರಂಭ.

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ್ (ಧಾರವಾಡ) :- ಸನ್ಮಾನ್ಯ ಅಧ್ಯಕ್ಷರೇ, ಧಾರವಾಡ ಸಮೀಪದ ಗರಗ ಗ್ರಾಮದ ಹತ್ತಿರ ಒಂದು ಡಿಸ್ಟಿಲರಿ ಮತ್ತು ಬಾಟಲಿಂಗ್ ಕಾರ್ಖಾನೆ ಎರಡು ವರ್ಷಗಳ ಹಿಂದೆ ಪ್ರಾರಂಭವಾಗಿದ್ದು, ಇತ್ತೀಚೆಗೆ ಅವರು ಏಪ್ರಿಲ್, ಮೇನಲ್ಲಿ ಮದ್ಯ ತಯಾರಿಕೆಯನ್ನೂಸಹ ಶುರು ಮಾಡಿದ್ದಾರೆ. ಈ ಮದ್ಯ ತಯಾರಿಕೆ ಮಾಡುತ್ತಿರುವ ಪ್ರದೇಶ ಬಹಳ ಎತ್ತರವಾದ ಪ್ರದೇಶದಲ್ಲಿದ್ದು ಇದರಿಂದ ಹೊರ ಬೀಳುವಂಥ ಏನು ರಾಸಾಯನಿಕಗಳಿವೆ, ಕೊಳಚಿ ಇದೆ, ಅದರಿಂದ ಹರಿದು ಬಂದ ನೀರು ಕೆರೆ ಟ್ಯಾಂಕ್‌ನಲ್ಲಿ ಬಂದಂಥ ನೀರಿನಿಂದ ದನಕರುಗಳಿಗೆ ಅನೇಕ ತರಹದ ಬಾಧೆಗಳಾಗಿ ಇವತ್ತು ಅನೇಕ ದನಕರುಗಳು ಸತ್ತಿವೆ ಎನ್ನುವ ಒಂದು ಅಪಾದನೆಯಿಂದ ರೈತರು ಬಹಳಷ್ಟು ಜನ ಬಂದು ಪರಿಸರ ಮಂತ್ರಿಗಳಾದಂಥ ಬಸವರಾಜ ಶಿವಣ್ಣನವರಿಗೆ, ವಿಶ್ವ ಪರಿಸರ ದಿನಾಚರಣೆಯ ದಿವಸ ಅವರು ಬಂದು ಭೇಟಿಯಾದರು. ಅದೇ ದಿವಸ ಪರಿಸರ ಮಂತ್ರಿಗಳಾದ ಬಸವರಾಜ ಶಿವಣ್ಣನವರಿಗೂ ಹೇಳಿದೆ. ಆಮೇಲೆ ಅದೇ ಕಾಲದಲ್ಲಿ ಪಲ್ಯೂಷನ್ ಬೋರ್ಡಿನ ಅಧ್ಯಕ್ಷರಾದಂಥ ಡಾ : ಬೆಂಗೇರಿ ಯವರೂ ಇದ್ದರು. ಅವರು ಮತ್ತು ಜಿಲ್ಲಾ ಪರಿಷತ್ತು ಅಧ್ಯಕ್ಷರಾದಂಥ ವಿ. ಎಸ್. ಪಾಟೀಲ್ ಮತ್ತು ನಾವು ಮೂರು ಮಂದಿಯೂ ಆ ರೈತರ ಒಂದು ಆಗ್ರಹದ ಮೂಲಕ ಆ ಕಾರ್ಖಾನೆಗೆ ವಿಸಿಟ್ ಮಾಡಿದ್ದೇವೆ. ಆ ಸುತ್ತಮುತ್ತಲ ಪ್ರದೇಶವನ್ನು ನಾವು ಸ್ವತಃ ಕಣ್ಣಾರೆ ಕಂಡಿದ್ದೇವೆ. ಪಲ್ಯೂಷನ್ ಬೋರ್ಡ್ ಛೇರ್‌ಮನ್, ಜಿಲ್ಲಾ ಪರಿಷತ್ತು ಅಧ್ಯಕ್ಷರು ಮತ್ತು ನಾನು ಸೇರಿ ಅಲ್ಲಿ ನಡೆದಂಥ ಆ ಪರಿಸರವನ್ನು ನೋಡಿದರೆ, ಆ ರಾಸಾಯನಿಕದಿಂದ ಕೆರೆಯಲ್ಲಾ ಇವತ್ತು ಮಲಿನವಾಗಿದೆ. ಆ ನೀರಿನಿಂದ ಅಲ್ಲಿಯ ದನಕರುಗಳಿಗೆ ಅಪಾಯವಿದೆ. ಇಷ್ಟೇ ಅಲ್ಲ, ಆ ನೀರಿನಿಂದ ಸುತ್ತಮುತ್ತಲ ಪ್ರದೇಶಗಳ ಗಿಡಗಳೂ ಸಹ ಸುಟ್ಟು ಹೋಗಿವೆ. ಬೆಳೆ ನಾಶವಾಗುವಂಥ ಪರಿಸ್ಥಿತಿ ಇದೆ ಮತ್ತು ಅದರಿಂದ ಹೊರಬೀಳುವಂಥ ವಾಯು ಏನಿದೆ, ಆ ಹವೆಯಿಂದ ಅಲ್ಲಿ ಸುತ್ತಮುತ್ತಲೂ ಇರುವಂಥ ಗುರುಬಗಟ್ಟಿ, ಮಗಳಗಟ್ಟಿ, ಆಗವಾಡ, ನೇರಳೇಕಟ್ಟಿ, ಗರಗ, ಲೋಕೂರು ಮುಂತಾದ 8-10 ಗ್ರಾಮಗಳ ಪ್ರತಿಯೊಂದು ಮನೆಯಲ್ಲಿ 4-5 ಜನ ಕಾಯಿಲೆಗೆ ತುತ್ತಾಗಿದ್ದಾರೆ. ಅವರು ಹೇಳುತ್ತಿರುವುದು ಏನೆಂದರೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಕಾಯಿಲೆಗೆ ತುತ್ತಾಗಿರುವುದರಿಂದ ಅದಕ್ಕೆ ಈ ಕಾರ್ಖಾನೆಯನ್ನೇ ಬಂದ್ ಮಾಡಬೇಕು. ಈ ಕಾರ್ಖಾನೆಯಿಂದ ಜನರಿಗೆ ಅಪಾಯ ಇದೆ. ಇಷ್ಟೇ ಅಲ್ಲ, ಹೊಲದಲ್ಲಿ ಕೆಲಸ ಮಾಡಲಿಕ್ಕೂ ಜನ ಕೂಲಿಗೆ ಹೋಗಲೂ ತಯಾರಿಲ್ಲ. ಸಾವಿರಾರು ಜನ ರೈತರು ಬಂದರು, ಅದನ್ನು ಸ್ವತಃ ಪ್ರತ್ಯೇಕವಾಗಿ ಕಂಡಿದ್ದಾರೆ. ಅದಕ್ಕೆ ದಯವಿಟ್ಟು ಒಂದು ತೀವ್ರವಾದಂಥ ಒಂದುಕ್ರಮವನ್ನು ತೆಗೆದುಕೊಳ್ಳಬೇಕು ಮತ್ತು ಪೊಲ್ಯೂಷನ್ ಬೋರ್ಡಿನವರು ತೀವ್ರವಾದಂಥ ಕ್ರಮ ತೆಗೆದುಕೊಳ್ಳಬೇಕು ಮತ್ತು ಪೊಲ್ಯೂಷನ್ ಬೋರ್ಡಿನವರು ತೀವ್ರವಾದಂಥ ಕ್ರಮ ತೆಗೆದುಕೊಂಡು ಆ ಕಾರ್ಖಾನೆಯನ್ನು ಆ ಜಾಗದಿಂದ ಬಂದ್ ಮಾಡಬೇಕು, ಅಲ್ಲಿಂದ ಷಿಫ್ಟ್ ಮಾಡಬೇಕು ಎಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳುತ್ತಿದ್ದೇನೆ.

ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ (ತಂತ್ರಜ್ಞಾನ, ಪರಿಸರ ಮತ್ತು ಅಸಂಪ್ರಾದಾಯಿಕ ಇಂಧನ ಇಲಾಖಾ ರಾಜ್ಯ ಸಚಿವರು) :- ಸನ್ಮಾನ್ಯ ಅಧ್ಯಕ್ಷರೇ, ಈ ಸಮಸ್ಯೆಯ ಬಗ್ಗೆ ಪಲ್ಯೂಷನ್ ಕಂಟ್ರೋಲ್ ಬೋರ್ಡಿನವರು ಹೋಗಿ ವಿಚಾರ ಮಾಡಿಕೊಂಡಿದ್ದಾರೆ. ಆನಂತರ, ಪೊಲೂಷನ್ ಕಂಟ್ರೋಲ್ ಬೋರ್ಡಿನವರು ಹೇಳಿದ ನಂತರ 10-15 ಹೊಂಡಗಳನ್ನು ಮಾಡಿ ಮೊಲಾಸಿಸ್ ಆರ್. ಎಸ್. ಆದ ನಂತರ ಏನು ಬರುತ್ತಿತ್ತು, ಆರ್. ಎಸ್. ತಯಾರಾದ ನಂತರ ಏನು ಹೋಗುತ್ತಿತ್ತು, ಅದನ್ನು ಹೋಗದ ಹಾಗೆ ಆದಷ್ಟು ವ್ಯವಸ್ಥೆ ಮಾಡಿದ್ದಾರೆ. ಆದರೂ ಸಹ ಮೊನ್ನೆ ಮಳೆ ಬಂದಿದ್ದರಿಂದ ಆ ಹೊಂಡಗಳು ತುಂಬಿ ಅದು ಹೋಗಿದ್ದು ನಿಜ. ಆ ಪ್ರಕಾರ ಒಂದು ವರದಿಯನ್ನು ತೆಗೆದುಕೊಂಡು ಬಂದು ಮಾಲೀಕ ವರ್ಗದವರೂ ಕೂಡ ಈಗಾಗಲೇ ಅಲ್ಲಿ ವಿಸಿಟ್ ಮಾಡಿದ್ದಾರೆ. ನಾನು ಮತ್ತು ಚಂದ್ರಕಾಂತ ಬೆಲ್ಲದ್‌ರವರು ಕೂಡ ಮಾತನಾಡಿದ್ದೇವೆ. ಇಬ್ಬರೂ ಹೋಗಿ ಅದನ್ನು ಯಾವ ಪ್ರಕಾರ ಬಗೆಹರಿಸಬೇಕು. ಅಷ್ಟನ್ನು ಮಾಡುತ್ತೇವೆ. ಒಂದು ವೇಳೆ, ಜನಗಳ ಆರೋಗ್ಯ ರೈತರ ಬೆಳೆಗೆ ನಾಶವಾಗುವಂಥ ಯಾವುದೇ ಪರಿಸ್ಥಿತಿ ಉಂಟಾದರೆ, ಸರ್ಕಾರ ಅದರ ಬಗ್ಗೆ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತದೆ.

ಅಧ್ಯಕ್ಷರು :- ಇದರಲ್ಲಿ ಚರ್ಚೆಯಿಲ್ಲ. ದಯಮಾಡಿ ಸಹಕರಿಸಬೇಕು. ನಾವು ನಿಯಮಗಳಿಗೆ ಅಂಟಿಕೊಂಡರೆ ಸದನ ಚೆನ್ನಾಗಿ ನಡೆಯುತ್ತದೆ. ಈಗ ಯೋಗೀಶ್ ಭಟ್‌ರವರು, ಎಂ.ಆರ್.ಪಿ.ಎಲ್. ಬಗ್ಗೆ.

(ಉ) ಎಂ.ಆರ್.ಪಿ.ಎಲ್. ಬಗ್ಗೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :- ಸನ್ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಜನತೆಗೆ ಬೃಹತ್ ಉದ್ದಿಮೆಗಳ ಬಗ್ಗೆ ಒಂದು ಮಾಸ್ ಹಿಸ್ಟೀರಿಯಾ ಉಂಟಾಗಿದೆ ಎಂದು ಜಿಲ್ಲಾಧಿಕಾರಿಗಳು ಮತ್ತು ಅಧಿಕಾರಿಗಳು ಮಾತನಾಡಲು ಆರಂಭಿಸಿದ್ದಾರೆ. ಇವತ್ತು ಅಲ್ಲಿ ಆಗಿರುವಂಥ ತೊಂದರೆಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದೇವೆ, ತರುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ಇವತ್ತು ಯೋಚನೆ ಮಾಡಬೇಕಾಗಿದೆ. ಈ ಮಾಸ್ ಹಿಸ್ಟೀರಿಯಾ ಅಧಿಕಾರಿಗಳಿಗೆ ಉಂಟಾಗಿದೆಯೇ? ಸರ್ಕಾರಕ್ಕೆ ಉಂಟಾಗಿದೆಯೇ? ಯಾರಿಗೆ ಉಂಟಾಗಿದೆ ಎನ್ನುವ ಪ್ರಶ್ನೆಯನ್ನು ಜಿಲ್ಲೆಯ ಜನತೆ ಮಾಡುತ್ತಿದ್ದಾರೆ. ತಾವು ದಯವಿಟ್ಟು ದಕ್ಷಿಣ ಕನ್ನಡ ಜಿಲ್ಲೆಯ ಜನರನ್ನು ನಿಮ್ಮಧಿಯಿಂದ ತಮ್ಮಷ್ಟಕ್ಕೆ ತಾವು ಬದುಕಲು ಬಿಡಿ ಎಂಬ ಒಂದು ಆಗ್ರಹವನ್ನು ಮಾಡುತ್ತೇನೆ. ಮೊನ್ನೆ ಎಂ.ಆರ್.ಪಿ.ಎಲ್. ಕಾರ್ಖಾನೆಗ 3 ಮಿಲಿಯನ್ ಟನ್‌ನಿಂದ 9 ಮಿಲಿಯನ್ ಟನ್‌ಗೆ ಹೆಚ್ಚಿನ ಉತ್ಪಾದನೆ ಮಾಡಲು ಅವಕಾಶವನ್ನು ಕೊಟ್ಟಿದ್ದಾರೆ, ಎನ್‌ಓಸಿ ಕೊಟ್ಟಿದ್ದಾರೆ ಎನ್ನುವ ಮಾಹಿತಿ ನನ್ನ ಗಮನಕ್ಕೆ ಬಂದಿದೆ. ಈಗಾಗಲೇ 3 ಮಿಲಿಯನ್ ಟನ್ ಇರುವಾಗಲೇ ಒಂದು ಪಂಪು ಹಾಳಾಗಿ ಆಗಿರುವಂಥ ಅನಾಹುತ, ಎಷ್ಟು ಗದ್ದೆಗಳು, ಭತ್ತದ ಭೂಮಿ ಹಾಳಾದದ್ದು, ಅದರಿಂದ ಆಗಿರುವಂಥ ತೊಂದರೆಗಳು ಎಲ್ಲವೂ ಗೊತ್ತಿದ್ದ ಹಿನ್ನೆಲೆಯಲ್ಲಿ ಕೂಡ 9 ಮಿಲಿಯನ್ ಟನ್ ಉತ್ಪಾದನೆಗೆ ಅವಕಾಶವನ್ನು